ಕರ್ನಾಟಕ ಸರ್ಕಾರ
ಕಾಲೇಜು ಶಿಕ್ಷಣ ಇಲಾಖೆ

ಸಂಖ್ಯೆ: ಕಾಶಿಇ:113:ಸಾಂ.ರ:2017-18:ಸೇವಿ

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ,
ತಾಂತ್ರಿಕ ಶಿಕ್ಷಣ ಭವನ, ಅರಮನೆ ರಸ್ತೆ,
ಬೆಂಗಳೂರು, ದಿನಾಂಕ:20.12.2017

## ಸುತ್ತೋಲೆ

**ವಿಷಯ:** ಸರ್ಕಾರಿ ಸೇವೆಯಲ್ಲಿದ್ದು, ಇಲಾಖೆಯಲ್ಲಿನ ವಿವಿಧ ಹುದ್ದೆಗಳಿಗೆ ನೂತನವಾಗಿ ನೇಮಕಾತಿಗೊಂಡಿರುವ/ಗೊಳ್ಳುವ ನೌಕರರಿಗೆ ಸಾಂದರ್ಭಿಕ ರಜೆ ಮಂಜೂರುಗೊಳಸುವ ಬಗ್ಗೆ

** ** **

ಪ್ರಸ್ತಾಪಿತ ವಿಷಯಕ್ಕೆ ಸಂಬಂಧಿಸಿದಂತೆ, ಸರ್ಕಾರಿ ಸೇವೆಯಲ್ಲಿದ್ದು ಇಲಾಖೆಯ ಸಹಾಯಕ ಪ್ರಾಧ್ಯಾಪಕರುಗಳ ಹುದ್ದೆಗಳಿಗೆ ನೂತನವಾಗಿ ನೇಮಕಗೊಂಡ ನೌಕರರು ಅವರ ಪೂರ್ವ ಇಲಾಖೆಗಳಿಂದ ಕರ್ನಾಟಕ ನಾಗರೀಕ ಸೇವಾ ನಿಯಮಗಳು ನಿಯಮ 252(ಬಿ) ಪ್ರಕಾರ ಕರ್ತವ್ಯದಿಂದ ಬಿಡುಗಡೆಗೊಂಡಾಗ ಅವರ ಹಿಂದಿನ ಸೇವಾ ಅವಧಿಯಲ್ಲಿ ಬಳಕೆಯಾಗದೆ ಉಳಿದಿರುವ ಸಾಂದರ್ಭಿಕ ರಜೆ ಮತ್ತು ನಿಬಂಧಿತ ರಜೆಯನ್ನು ಮುಂದುವರೆಸುವಂತೆ ಕೋರಿ ಹಲವಾರು ಮನವಿಗಳು ಸ್ವೀಕೃತವಾಗಿರುತ್ತದೆ.

ಈ ಕಛೇರಿಗೆ ಸದರಿ ವಿಷಯದ ಸಂಬಂಧದಲ್ಲಿ ಕಾಲೇಜುಗಳ ಪ್ರಾಂಶುಪಾಲರುಗಳಿಂದ ಸ್ವೀಕರಿಸಲಾದ ಮನವಿಗಳನ್ನಾಧರಿಸಿ ಅವರಿಗೆ ಆಗ್ಗಿಂದಾಗ್ಗೆ ಸ್ಪಷ್ಟೀಕರಣ ನೀಡಲಾಗುತ್ತಿದೆ. ಆದಾಗ್ಯೂ ಕೆಲ ಕಾಲೇಜಿನ ಪ್ರಾಂಶುಪಾಲರು ನೀಡಲಾಗುತ್ತಿರುವ ನಿರ್ದೇಶನವನ್ನು ಪ್ರತ್ಯೇಕವಾಗಿ ಪ್ರತಿಯೊಬ್ಬ ನೌಕರರಿಗೆ ಸ್ಪಷ್ಟೀಕರಣ ನೀಡಬೇಕೆಂಬ ನಿಟ್ಟಿನಲ್ಲಿ ಈ ಕಛೇರಿಗೆ ಮಾರ್ಗದರ್ಶನ ಕೋರಿ ಪತ್ರಗಳನ್ನು ಪರಿಚಲಿಸುತ್ತಿರುತ್ತಾರೆ.

ಆದುದರಿಂದ, ಕರ್ನಾಟಕ ನಾಗರೀಕ ಸೇವಾ ನಿಯಮಗಳು 1958ರ ನಿಯಮ 252(ಬಿ) ಮತ್ತು ಸದರಿ ನಿಯಮಕ್ಕೆ ಸಂಬಂಧಿಸಿದಂತೆ ಸರ್ಕಾರವು ಹೊರಡಿಸಿರುವ ಅಧಿಕೃತ ಜ್ಞಾಪನ ಸಂಖ್ಯೆ: ಸಂಖ್ಯೆ:ಎಫ್.ಡಿ:263:ಎಸ್.ಆರ್.ಎಸ್:1971, ದಿನಾಂಕ:22.01.1972ರನ್ವಯ ಸರ್ಕಾರಿ ಸೇವೆಯಲ್ಲಿ ಇತರೆ ಇಲಾಖೆಯಗಳಲ್ಲಿ ಕರ್ತವ್ಯ ನಿರ್ವಹಿಸಿ ಈ ಇಲಾಖೆಯ ವಿವಿಧ ಹುದ್ದೆಗಳಿಗೆ ನೇಮಕಾತಿಗೊಂಡು ಕರ್ನಾಟಕ ನಾಗರೀಕ ಸೇವಾ ನಿಯಮಗಳು 1958ರ ನಿಯಮ 252(ಬಿ) ಪ್ರಕಾರ ಕರ್ತವ್ಯದಿಂದ ಬಿಡುಗಡೆಗೊಂಡಿದ್ದರಷ್ಟೆ ಸದರಿ ನೌಕರರಿಗೆ ಖಾತೆಯಲ್ಲಿ ಉಳಿದಿರುವ ಸಾಂದರ್ಭಿಕ/ನಿರ್ಬಂಧಿತ ರಜೆಯನ್ನು ಹಿಂದಿನ ಇಲಾಖೆಯ ಕಛೇರಿ ಮುಖ್ಯಸ್ಥರು ದೃಢೀಕರಿಸಿ ನೀಡಿರುವುದನ್ನು ಪರಿಶೀಲಿಸಿಕೊಂಡು ಉಪಯೋಗಿಸಿಕೊಳ್ಳಲು ಅನುಮತಿ ನೀಡಲು ತಿಳಸಲಾಗಿದೆ.

ಕಾಲೇಜು ಶಿಕ್ಷಣ ಮುಖ್ಯ ಆಡಳತಾಧಿಕಾರಿಗಳು

**ಇವರಿಗೆ(ಮಾಹಿತಿ ಮತ್ತು ಅಗತ್ಯ ಕ್ರಮಕ್ಕಾಗಿ):**

1) ಇಲಾಖಾ ವ್ಯಾಪ್ತಿಯ ಎಲ್ಲಾ ಪ್ರಾದೇಶಿಕ ಜಂಟಿ ನಿರ್ದೇಶಕರುಗಳಿಗೆ
2) ಇಲಾಖಾ ವ್ಯಾಪ್ತಿಯ ಎಲ್ಲಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಸರ್ಕಾರಿ ಕಾನೂನು ಕಾಲೇಜು, ಸರ್ಕಾರಿ ಗೃಹ ವಿಜ್ಞಾನ ಕಾಲೇಜುಗಳ ಪ್ರಾಂಶುಪಾಲರಿಗೆ
3) ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ, ಬೆಂಗಳೂರು ಇಲ್ಲಿನ ಎಲ್ಲಾ ವಿಭಾಗದ ಮುಖ್ಯಸ್ಥರುಗಳಿಗೆ
4) ಮಾಹಿತಿ ತಂತ್ರಜ್ಞಾನ ಅಧಿಕಾರಿಗಳು, ಮಾಹಿತಿ ವಿಭಾಗ, ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ, ಬೆಂಗಳೂರು(ಇಲಾಖಾ ವೆಬ್‌ಸೈಟ್‌ನಲ್ಲಿ ಪ್ರಕಟಿಸುವುದು)
5) ಕಛೇರಿ ಪ್ರತಿ